ಬೆರಗಾದರು. ಹೈಸ್ಕೂಲು ವಾಚನಾಲಯದಲ್ಲಿದ್ದ ಶರತ್ಚಂದ್ರ ಚಟರ್ಜಿ, ರವೀಂದ್ರನಾಥ ಟ್ಯಾಗೋರ್, ಪ್ರೇಮಚಂದ, ಮರಾಠಿಯ ನಾ.ಸಿ. ಫಡ್‌ಕೆ, ವಿ.ಸ. ಖಾಂಡೇಕರ, ಪು.ಲ. ದೇಶಪಾಂಡೆ ಮೊದಲಾದ ಲೇಖಕರ ಸಾಹಿತ್ಯದಿಂದ ಪ್ರಭಾವಿತರಾದರು.

ಇವರು ಹನ್ನೆರಡನೇ ವಯಸ್ಸಿನಲ್ಲಿದ್ದಾಗ ತಂದೆಯನ್ನು ಕಳೆದುಕೊಂಡರು. ಮನೆಯ ಜವಾಬ್ದಾರಿ ತಾಯಿ ನೋಡಿಕೊಳ್ಳುತ್ತಿದ್ದರೂ ವ್ಯಾಪಾರ, ಮನೆಯ ಕೆಲಸಗಳಲ್ಲಿ ತಾಯಿಗೆ ಹೆಗಲೆಣೆಯಾಗಿ ನಿಲ್ಲಬೇಕಾಯಿತು.

ಒಂದು ಕಾಲದಲ್ಲಿ ತಾಯಿ ಪಠ್ಯೇತರ ಪುಸ್ತಕಗಳನ್ನು ಓದಲು ಮಗನನ್ನು ಹುರಿದುಂಬಿಸುತ್ತಿದ್ದರು. ಆದರೆ, ತಂದೆ ಗತಿಸಿದ ಬಳಿಕ ತಾಯಿ ದಾಮೋದರನಿಗೆ ಕತೆ ಕಾದಂಬರಿ ಓದಲು ಬಿಡುತ್ತಿರಲಿಲ್ಲ. ಅದಕ್ಕೆ ಕಾರಣವೂ ಇತ್ತು. ಇವರು ಶಾಲೆಯ ಪರೀಕ್ಷೆಗಳಲ್ಲಿ ಭಾಷಾಶಾಸ್ತ್ರದಲ್ಲಿ ಹೆಚ್ಚಿನ ಅಂಕಗಳನ್ನು ಪಡೆಯುತ್ತಿದ್ದರು. ಇತರ ವಿಷಯಗಳಲ್ಲಿ ಅಷ್ಟಕಷ್ಟೇ. ಹೀಗಾದರೆ ಮಗನ ಭವಿಷ್ಯ ಕಾರ್ಗತ್ತಲೆಯಲ್ಲಿ ಇರಬೇಕಾಗುತ್ತದೆ ಎಂದು ಭಾವಿಸಿದ ತಾಯಿ, ಪಠ್ಯೇತರ ಓದಿಗೆ ನಿರ್ಬಂಧ ಹಾಕಿದರು. ಕತೆ, ಕಾದಂಬರಿಗಳ ಓದಿನ ರುಚಿ ಹತ್ತಿದ ದಾಮೋದರ ಪಠ್ಯಪುಸ್ತಕಗಳ ನಡುವೆ ಕತೆ, ಕಾದಂಬರಿಗಳನ್ನಿಟ್ಟು ಓದಿ ತಾಯಿಯ ಕೈಗೆ ಒಮ್ಮೆ ಸಿಕ್ಕುಬಿದ್ದರು!

ಶಾಲೆಯಲ್ಲಿ ಕಡ್ಡಾಯವಾಗಿ ಪೋರ್ಚುಗೀಸ್ ಭಾಷೆ ಓದಲೇಬೇಕಾಗಿತ್ತು. ದ್ವಿತೀಯ ಭಾಷೆಯಾಗಿ ಮರಾಠಿ ಓದಬಹುದಿತ್ತು. ಮರಾಠಿ, ಹಿಂದಿ ಭಾಷೆಯ ಸಾಹಿತ್ಯ ಲಭ್ಯವಿದ್ದುದರಿಂದ ಪೋರ್ಚುಗೀಸ್ ಭಾಷೆ ಕಡ್ಡಾಯವಾದರೂ ಮರಾಠಿ, ಹಿಂದಿ ಭಾಷೆಗಳತ್ತ ಒಲವು ಹೆಚ್ಚಾಯಿತು.

ಇವರು 14 ವರ್ಷದವರಿದ್ದಾಗ ಮೇಷ್ಟ್ರು ಒಂದು ವಿಷಯ ಕೊಟ್ಟು ನಿಬಂಧ ಬರೆಯಲು ಹೇಳಿದ್ದರು. ಆ ನಿಬಂಧ ಬರೆದು ತೋರಿಸಿದಾಗ ಮೇಷ್ಟ್ರು, 'ನೀನು ಮರಾಠಿಯಲ್ಲಿ ಚೆನ್ನಾಗಿ ಬರೆಯುತ್ತೀ, ಫ್ರೆಂಚ್‌ನಲ್ಲಿ ಬರೆದರೆ ಅವಕಾಶಗಳು ಜಾಸ್ತಿ. ನಿನ್ನಲ್ಲಿ ಒಳ್ಳೆಯ ಬರಹಗಾರನಾಗುವ ಅವಕಾಶಗಳಿವೆ. ಹೀಗೆಯೇ ಮುಂದುವರಿಸು' ಎಂದರು. ಇದು ದಾಮೋದರರ ಪಾಲಿಗೆ ಅಮೃತವಾಣಿಯಾಯಿತು. ಅವರ ಮಾತೇ ದಾರಿದೀಪವಾಯಿತು. ಅವರು ಹೇಳಿದ ದಾರಿಯಲ್ಲಿ ಮುನ್ನಡೆದ ದಾಮೋದರರನ್ನು ಈಗ ಭಾರತದ ಉನ್ನತ ಸಾಹಿತ್ಯ ಪ್ರಶಸ್ತಿಯಾದ ಜ್ಞಾನಪೀಠ ಅರಸಿಕೊಂಡು ಬಂದಿದೆ.

1961ರಲ್ಲಿ ಎಸ್.ಎಸ್.ಸಿ. (ಮ್ಯಾಟ್ರಿಕ್) ಪರೀಕ್ಷೆ ಪಾಸಾದ ಇವರು ಮುಂಬಯಿಯ ಮಾತುಂಗಾದಲ್ಲಿರುವ ಆರ್.ಎ. ಪೊದ್ದಾರ್ ಕಾಲೇಜ್ ಆಫ್ ಕಾಮರ್ಸ್‌ನಲ್ಲಿ ನಾಲ್ಕು ವರ್ಷ ಓದಿ, ಮುಂಬಯಿ ವಿಶ್ವವಿದ್ಯಾಲಯದಿಂದ ಬಿ.ಕಾಂ. ಪದವಿ ಪಡೆದರು. ಮುಂಬಯಿಯಲ್ಲಿದ್ದ ನಾಲ್ಕು ವರ್ಷಗಳ ಕಾಲ ಇವರು ಸುಮ್ಮನೇ ಕೂಡಲಿಲ್ಲ. ಆಗ ಮುಂಬಯಿಯಲ್ಲಿದ್ದ ಗೋವೆಯ ಜನ ಒಟ್ಟಾಗಿ ಗೋವಾ ಸ್ವಾತಂತ್ರ್ಯಕ್ಕಾಗಿ ಹೋರಾಟ ನಡೆಸಿದ್ದರು. ಆ ಗುಂಪಿನಲ್ಲಿ ಇವರೂ ಇದ್ದರು.

ಅದುವರೆಗೆ ಇವರಿಗೆ ಕೊಂಕಣಿ ಭಾಷೆಯಲ್ಲಿ ಬರೆಯುವವರಿದ್ದಾರೆ, ಪುಸ್ತಕಗಳು ಮಾರಾಟವಾಗುತ್ತವೆ ಎಂದು ಗೊತ್ತಿರಲಿಲ್ಲ. ಗೋವೆಯ ಕೊಂಕಣಿ ಭಾಷೆಯ ಆಚಾರ್ಯ ಪುರುಷರೆಂದು ಗುರುತಿಸಲ್ಪಡುವ ವಾಮನ ರಘುನಾಥ ವರ್ದೆ ವಾಲಾವಲೀಕಾರ್ (ಶೆಣ್ಯೆ ಗೊಂಯಬಾಬ್) ಮುಂಬಯಿಯಲ್ಲಿ ಸಂಶೋಧನೆ ಮಾಡುತ್ತ, ಸಾಹಿತ್ಯ ಕೃಷಿಗಿಳಿದಿದ್ದರು. ದಾಮೋದರ ಮಾವ್‌ಜೊ ಅವರ ಪ್ರಭಾವಕ್ಕೊಳಗಾಗಿ ಕೊಂಕಣಿಯಲ್ಲಿ ಚಿಕ್ಕ ಚಿಕ್ಕ ಕತೆ ಬರೆಯಲಾರಂಭಿಸಿದರು. ಅವು ನಿಯತಕಾಲಿಕೆಗಳಲ್ಲಿ ಪ್ರಕಟಣೆಗೊಂಡು ಒಳ್ಳೆಯ ಪ್ರತಿಕ್ರಿಯೆ ಬರಲಾರಂಭಿಸಿತು.

ಅದೇ ಹೊತ್ತಿಗೆ ಅವರು ಓದು ಮುಗಿಸಿ ಹಿರಿಯರು ಹಾಕಿಕೊಟ್ಟ ಕಿರಾಣಿ ವ್ಯಾಪಾರಕ್ಕೆ ಬರಬೇಕಾಯಿತು. ಇವರಿರುವ ಊರಿನಲ್ಲಿ ಕ್ರಿಶ್ಚಿಯನ್‌ರ ಸಂಖ್ಯೆ ಜಾಸ್ತಿ. ಇವರ ಮನೆಯ ಸುತ್ತಮುತ್ತ,